

ಎವರೆಟ್‌ನ ಬೋಯಿಂಗ್ ಫ್ಯಾಕ್ಟರಿಯಿಂದ ಹೊರಬಂದ ಕೊನೆಯ 'ಬೋಯಿಂಗ್ 747'




ಮೊದಲ 'ಬೋಯಿಂಗ್ 747' ಜಂಬೋ ಜೆಟ್

ಅಧ್ಯಕ್ಷರ ಪ್ರವಾಸದ ನಡುವೆ ಅವರ ಮನೆ ಮತ್ತು ಕಚೇರಿಯಂತೆ ಬಳಕೆಯಾಗುವುದರೊಂದಿಗೆ, ಒಂದು ವೇಳೆ ಅಣುಯುದ್ಧವೂ (ನ್ಯೂಕ್ಲಿಯರ್ ವಾರ್) ಸೇರಿದಂತೆ ಅನೂಹ್ಯ ಪ್ರಕ್ಷುಬ್ಧ ಪರಿಸ್ಥಿತಿಗಳು ಉಂಟಾದಲ್ಲಿ, ಇವುಗಳಲ್ಲಿ ಕುಳಿತ ಅಧ್ಯಕ್ಷರು ಆ ವಿಮಾನದಲ್ಲಿರುವ ಅತ್ಯಾಧುನಿಕ ಹಾಗೂ ಅಭೇದ್ಯವಾದ ಸಂಪರ್ಕ ಸಾಧನಗಳ ನೆರವಿನೊಡನೆ, ಹಾರಾಟದ ನಡುವೆಯೇ ತಮ್ಮ ದೇಶದ ಸೇನೆಗೆ ಹೇಗೆ ಪ್ರತಿದಾಳಿ ಮಾಡಬೇಕೆಂಬ ಆಜ್ಞೆಗಳನ್ನು ನೀಡಲು ಸಮರ್ಥರಾಗಿರುತ್ತಾರೆ.

2001ರ ನವೆಂಬರ್‌ನಲ್ಲಿ ನ್ಯೂಯಾರ್ಕ್‌ನ 'ವರ್ಲ್ಡ್ ಟ್ರೇಡ್ ಸೆಂಟರ್' ಹಾಗೂ ಅಮೆರಿಕದ ರಕ್ಷಣಾ ಇಲಾಖೆ 'ಪೆಂಟಗನ್'ನ ಮೇಲೆ ಅಲ್ ಕೈದಾ ಭಯೋತ್ಪಾದಕರು ದಾಳಿಮಾಡಿದರಷ್ಟೆ. ಆ ಪರಿಸ್ಥಿತಿಯಲ್ಲಿ ತಮ್ಮ ನಿವಾಸವಾದ 'ವೈಟ್ ಹೌಸ್'ನ ಸುರಕ್ಷತೆಯನ್ನು ಅನುಮಾನಿಸಿದ ಅಧ್ಯಕ್ಷ ಜಾರ್ಜ್ ಬುಷ್ ಜೂನಿಯರ್ ಅವರು 'ಏರ್‌ಫೋರ್ಸ್ ಒನ್' ವಿಮಾನದಲ್ಲಿ ಗಗನಕ್ಕೇರಿ, ಸುಮಾರು ಒಂಬತ್ತು ಗಂಟೆಗಳ ಕಾಲ ಅಲ್ಲಿಂದಲೇ ತಮ್ಮ ಸೇನೆಯ ಜೊತೆ ಸಂಪರ್ಕದಲ್ಲಿದ್ದರು!

ಏರ್ ಇಂಡಿಯಾದ ಬೋಯಿಂಗ್ 747 ವಿಮಾನಗಳು ನಮ್ಮ ಪ್ರಧಾನ ಮಂತ್ರಿಗಳನ್ನು ಹಾಗೂ ರಾಷ್ಟ್ರಪತಿಗಳನ್ನು ಅವರ ನಿಯೋಗದೊಂದಿಗೆ ವಿದೇಶ ಪ್ರವಾಸಕ್ಕೆ ಅನೇಕ ಬಾರಿ ಕರೆದುಕೊಂಡು ಹೋಗಿವೆ.

ಅಮೆರಿಕದ ಅಂತರಿಕ್ಷ ಶಟಲ್ ಎಂಬ ವಿಶೇಷ ರಾಕೆಟ್ ವಿಮಾನ ಬಳಕೆಯಲ್ಲಿದ್ದಾಗ, ಒಂದು ಕಾಲದಲ್ಲಿ ಅದನ್ನು ಇಳಿದಾಣದಿಂದ ಉಡಾವಣಾ ಕೇಂದ್ರಕ್ಕೆ ಕೊಂಡೊಯ್ಯುತ್ತಿದ್ದದ್ದು ಇದೇ ಜಂಬೋ ಜೆಟ್. ಇನ್ನು ಈ ವಿಮಾನದಲ್ಲಿ ವಿಶೇಷವಾದ ಅವಕೆಂಪು (ಇನ್ಫ್ರಾರೆಡ್) ದೂರದರ್ಶಕವನ್ನು ಅಳವಡಿಸಿ ಬಹುಎತ್ತರಕ್ಕೆ ಅದನ್ನು ಕೊಂಡೊಯ್ದು ವೀಕ್ಷಣೆ ನಡೆಸುವ ಮೂಲಕ ಹೊಸ ಖಗೋಲ ವಿದ್ಯಮಾನಗಳನ್ನು ಗ್ರಹಿಸಲು ವಿಜ್ಞಾನಿಗಳಿಂದು ಸಮರ್ಥರಾಗಿದ್ದಾರೆ.

## ಉಪಗ್ರಹ ಉಡಾವಣಾ ವೇದಿಕೆ

ವಿಮಾನಯಾನ ಕ್ಷೇತ್ರದಲ್ಲಿ ಅಪಾರವಾದ ಯಶಸ್ಸನ್ನು ಕಂಡು, ಇದೀಗ ಅಂತರಿಕ್ಷ ಪ್ರವಾಸೋದ್ಯಮ ಕ್ಷೇತ್ರವನ್ನು ಪ್ರವೇಶಿಸಿರುವವರಲ್ಲಿ ಮೊದಲಿಗರಾದ ರಿಚರ್ಡ್ ಬ್ರಾನ್ಸನ್ ಅವರು ತಮ್ಮ 'ವರ್ಜಿನ್' ಸಂಸ್ಥೆಯ ಬೋಯಿಂಗ್ 747 ವಿಮಾನವೊಂದಕ್ಕೆ 'ಕಾಸ್ಮಿಕ್ ಗರ್ಲ್' ಎಂಬ ಹೆಸರಿಟ್ಟು, ಅದರಲ್ಲಿ ಪುಟ್ಟ ಉಪಗ್ರಹಗಳನ್ನು ಉಡಾಯಿಸುತ್ತಿದ್ದಾರೆ. ಸುಮಾರು ಮೂವತ್ತೈದು ಸಾವಿರ ಅಡಿ ಎತ್ತರ ತಲುಪಿದ ನಂತರ, ಆ ವಿಮಾನದ ದೇಹದಡಿ ಅಳವಡಿಸಲಾದ ರಾಕೆಟ್,



**ಅಮೆರಿಕದ ಅಂತರಿಕ್ಷ ಶಟಲ್ ಎಂಬ ವಿಶೇಷ ರಾಕೆಟ್ ವಿಮಾನ ಬಳಕೆಯಲ್ಲಿದ್ದಾಗ, ಒಂದು ಕಾಲದಲ್ಲಿ ಅದನ್ನು ಇಳಿದಾಣದಿಂದ ಉಡಾವಣಾ ಕೇಂದ್ರಕ್ಕೆ ಕೊಂಡೊಯ್ಯುತ್ತಿದ್ದದ್ದು ಇದೇ ಜಂಬೋ ಜೆಟ್!**